ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಒಟ್ಟಿನಲ್ಲಿ ಈ ಯೋಜನೆಗಳು ಫಲಾನುಭವಿಗಳ ಜೀವನ ಮಟ್ಟವನ್ನು ಉತ್ತಮಪಡಿಸುವುದರಲ್ಲಿ ಸಹಾಯವಾಗಿದೆ.

ಆ) ಒಂದು ಒಳ್ಳೆಯ ಸಂಸ್ಥೆಯ ಮೂಲಕ ಸರ್ವೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಸಿದ್ದಯ್ಯ : ಇಲ್ಲಿ ನನ್ನ ಎರಡನೇಯ ಪ್ರಶ್ನೆಗೆ, ಒಂದು ಒಳ್ಳೆಯ ಸಂಸ್ಥೆ ಮೂಲಕ ಸರ್ವೆ ಮಾಡಿಸುತ್ತೇವೆ ಎಂದು ತಾವು ಹೇಳಿದ್ದೀರಿ. ಇದುವರೆಗೆ ಯಾವುದಾದರೂ ಒಂದು ಒಳ್ಳೆಯ ಸಂಸ್ಥೆಯನ್ನು ಪತ್ತೆ ಹಚ್ಚಿದ್ದೀರಾ? ಹಾಗೆ ಹಚ್ಚಿದ್ದರೆ ಯಾವುದು ಒಂದು ವೇಳೆ ಹಚ್ಚಿದ್ದರೆ ಇನ್ನು 1-2 ತಿಂಗಳಲ್ಲಿ ಸರ್ವೆ ಮಾಡುವುದಕ್ಕೆ * ಅವರಿಗೆ ಏನೇನು ಬೇಕೋ ಅದನ್ನು ಒದಗಿಸಿಕೊಡುತ್ತೀರಾ? ಜೊತೆಗೆ ಈಗಾಗಲೇ ಒಂದೊಂದು ತಾಲ್ಲೂಕುಗಳಲ್ಲಿ ಸಹ ಒಂದು ರೆವ್ಯೂ ಕಮಿಟಿ ಇದೆ. ಆ ಕಮಿಟಿ ಮೂಲಕ ಇರತಕ್ಕಂಥ ರೆವ್ಯೂ ಫಿಗರ್ಸ್‌ನ್ನು ಸಪ್ಲೈ ಮಾಡಿಕೊಡುತ್ತೀರಾ?

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷಣೆಯವರೆ, ಈಗಾಗಲೇ ಎರಡನೆಯ ಪ್ರಶ್ನೆಗೆ ಮಾನ್ಯ ಸದಸ್ಯರು ಕೇಳಿದ ಹಾಗೆ ನಾವು ಇನ್ಸ್‌ಟಿಟ್ಯೂಟ್ ಆಫ್ ಸೋಷಿಯೋ ಎಕಾನಮಿಕ್ ಛೇಂಜಸ್, ಇದರಲ್ಲಿ ಬಡವರಿಗೆ 10 ಸಾವಿರ ರೂಪಾಯಿ ಕೊಡುತ್ತಿದ್ದೇವೆ. ನಿಜಾವಾಗಿಯೂ ಇದು ಕೂಡ ಅವರಿಗೆ ಮುಟ್ಟುತ್ತಾ ಇದೆಯೇ ಅಥವಾ ಇಲ್ಲವೇ?

ಅದನ್ನು ಯಾವ ರೀತಿಯಾಗಿ ಮಾಡಬೇಕು ಎಂಬ ಬಗ್ಗೆ ನಾವು ಆ ಸಂಸ್ಥೆಗೆ ವಹಿಸಿಕೊಟ್ಟಿದ್ದೇವೆ. ರಿಪೋರ್ಟ್ ಬಂದಮೇಲೆ ಅದರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಸಿದ್ಧಯ್ಯ : ಅವರು ಮಾಡಿರತಕ್ಕಂಥಾದ್ದು ಸ್ವಾಗತಾರ್ಹ. ಒಂದೆರಡು ತಿಂಗಳಲ್ಲಿ ಇದು ಕಾರ್ಯೋನ್ಮುಖ ಆಗುವ ಹಾಗೆ ಅವರಿಗೆ ಏನೇನು ಸೌಲಭ್ಯಗಳು ಬೇಕೋ ಅದನ್ನು ಒದಗಿಸಿಕೊಟ್ಟು ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ? ಜೊತೆಗೆ ಅದಕ್ಕಿಂತ ಮುಂಚೆ ಈಗಾಗಲೇ ಪ್ರತಿಯೊಂದು ತಾಲ್ಲೂಕು ಲೆವೆಲ್‌ನಲ್ಲೂ ರೆವ್ಯೂ ಕಮಿಟಿಗಳು ಇವೆ. ತಾಲ್ಲೂಕು ಪಂಚಾಯಿತಿ ಕಮಿಟಿಗಳು ಇವೆ. ಅವು ರೆವ್ಯೂ ಮಾಡಿರುವ ಫಿಗರ್ಸ್‌ನ ಸಪ್ಲೈ ಮಾಡಿಸಿಕೊಡುತ್ತೀರ? ಕೊನೆಯ ಪಕ್ಷ ನಮ್ಮ ಚಾಮರಾಜ ನಗರದಲ್ಲಿ ತಾಲ್ಲೂಕಿನಲ್ಲಿ ಇರುವ ರೆವ್ಯೂ ಕಮಿಟಿ ಫಿಗರ್‌ಗಳನ್ನು ಕೊಡಿಸಿಕೊಡುತ್ತೀರ?

ಶ್ರೀ ಧರ್ಮಸಿಂಗ್ : ನಾನು ಮೊನ್ನೆ ರಾಜ್ಯಮಟ್ಟದಲ್ಲಿ ಕೂಡ ರೆವ್ಯೂ ಮಾಡಿದ್ದೇನೆ. I have given direction to all t he Zilla Parishad Chief Secretaries, implementing agenciess.

ಅವರ ಕೇತ್ರಕ್ಕೆ ಸಂಬಂಧಪಟ್ಟಂತೆ ಬೇರೆ ಕಡೆ ಕೂಡ ರೆವ್ಯೂ ಮಾಡಿದ್ದರ, ಅಂಕಿ ಅಂಶಗಳನ್ನು ಕೊಡುತ್ತೇನೆ.

ಬೆಂಗಳೂರಿನ ಜಯನಗರದಲ್ಲಿ ಸಮುದಾಯ ಭವನ ನಿರ್ಮಾಣ

888-ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರಪಾಲಿಕೆಯಿಂದ 1983ರಲ್ಲಿ ಜಯನಗರ 5ನೇ ಬ್ಲಾಕ್ ನಲ್ಲಿ ಸಮುದಾಯ ಭವನ ಮಂಜೂರಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಜಯನಗರ 5ನೇ ಬ್ಲಾಕ್‌ನಲ್ಲಿ ಸಮುದಾಯಭವನ ನಿರ್ಮಾಣಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆಯೇ?

ಇ) ಹಾಗಿದ್ದಲ್ಲಿ ಅದಕ್ಕೆ ಸಕಾರಣಗಳೇನು?

ಈ) ಮೇಲಿನ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ಇಲ್ಲ

ಇ) ಜಯನಗರ 5ನೇ ಬ್ಲಾಕ್‌ನ ನಿವಾಸಿಗಳು ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಡಬ್ಲ್ಯೂ ಪಿ.ನ. 7710:84, ದಿನಾಂಕ 7-5-84ರಂದು ತಂದ ಪ್ರಯುಕ್ತ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದಿಲ್ಲ.

ಈ) ಮೇಲೆ ತಿಳಿಸಿದ ತಡೆಯಾಜ್ಞೆಯ 24-4-90ರಂದು ತೆರವಾಗಿದೆ. ಕಾಮಗಾರಿ ಪ್ರಾರಂಭಿಸಲು ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ : 1983ರಲ್ಲಿ ಜಯನಗರ 5ನೇ ಬ್ಲಾಕಿನಲ್ಲಿ ಕಮ್ಯೂನಿಟಿ ಹಾಲ್ ಕಟ್ಟಬೇಕು ಎಂದು ಆಯಿತು. ಅಲ್ಲಿ ಲೋಕಲ್ ರೆಸಿಡೆನ್ಸಿ ಎಲ್ಲಾ ಕೋರ್ಟಿಗೆ ಹೋಗಿ ಒಂದು ಸ್ಟೇ ತಂದರು. 1989ರಲ್ಲಿ ಅದು ಸ್ಟೇ ವೆಕೇಂಟ್ ಆಯಿತು. ಸ್ಟೇ ವೆಕೇಂಟ್ ಆಗಿ ಎರಡು ವರ್ಷ ಆಗಿದ್ದರೂ ಇನ್ನು ಕಮ್ಯೂನಿಟಿ ಹಾಲ್ ಕಟ್ಟುವುದಕ್ಕೆ ಆಗಿಲ್ಲ. ಕಾರ್ಪೊರೇಷನ್ನಿನವರು ಯಾವಾಗ ಇದನ್ನು ಪ್ರಾರಂಭ ಮಾಡುತ್ತಾರೆ?

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, 1982-83ನೇ ಇಸವಿಯಲ್ಲಿ ಈ ಕಮ್ಯೂನಿಟಿ ಹಾಲ್ ಕಟ್ಟಬೇಕು ಎಂದು 9.75 ಲಕ್ಷ ಎಸ್ಟಿಮೇಟ್‌ನ್ನು ಮಾಡಿದರು. ಅದು ಅಪ್ರೂವ್ ಆಯಿತು. ಈ ಮಧ್ಯೆ 7-8-94ರಲ್ಲಿ ಒಬ್ಬರು ರಿಟ್ ಪೆಟಿಷನ್ ಹೈಕೋರ್ಟಿನಲ್ಲಿ ಹಾಕಿ ಅದು ಸ್ಟೇ ಆಗಿ ಆ ರಿಟ್ ಪೆಟಿಷನ್ 24-10-90ರಲ್ಲಿ ವೇಕೆಂಟ್ ಆಗಿದೆ. ಅದು ಡಿಸ್ ಪೋಸ್ ಆಗಿಬಿಟ್ಟಿದೆ. ಈಗ 92-93ರಲ್ಲಿ ವರ್ಕ್ಸ್ ಕಮಿಟಿಯಲ್ಲಿ ಇದನ್ನು ಅಪ್ರೂವ್ ಮಾಡಿದ್ದಾರೆ. ಅದನ್ನು ಬೇಗ ಮಾಡಿಸುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಹೈಕೋರ್ಟಿನಲ್ಲಿ ಸ್ಟೇ ಇತ್ತು, ಸ್ಟೇ ವೇಕೆಂಟ್ ಆಗಿ ಎರಡು ವರ್ಷ ಆಗಿದೆ. ಆದರೂ ಪ್ರಾರಂಭ ಮಾಡಿಲ್ಲ. ಯಾವಾಗ ಪ್ರಾರಂಭ ಮಾಡುತ್ತಾರೆ ಅದನ್ನು ಹೇಳಬೇಕು.

ಶ್ರೀ ಚೌಡರೆಡ್ಡಿ : ಇದು ವರ್ಕ್ಸ್ ಕಮಿಟಿಯಲ್ಲಿ 1992-93ರಲ್ಲಿ 21ಲಕ್ಷಕ್ಕೆ ಅಪ್ರೂವ್ ಆಗಿದೆ. ಮಂಜೂರು ಮಾಡಿದ್ದಾರೆ. ಬೇಗ ತೆಗೆದುಕೊಳ್ಳುತ್ತೇವೆ.